ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ.   4404-2023

ಸಿ.ಡಬ್ಲ್ಯೂ -07
ಪಿ.ಡಬ್ಲ್ಯೂ-11

ಸಾಕ್ಷಿದಾರನ ಹೆಸರು  :-  ಬಿ.ಎಸ್ ಕೃಷ್ಣ
ತಂದೆಯ   ಹೆಸರು   :-  ಲೇಟ್ ಶಿವಣ್ಣ
ವಯಸ್ಸು   :-  48 ವರ್ಷ
ಉದ್ಯೋಗ   :-  ವ್ಯವಸಾಯ
ವಾಸ   :- ಬ್ಯಾಲದಕೇರೆ

**<u>ಸಾಕ್ಷಿಗೆ ದಿಃ 23.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು</u>.**

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ಸ್ಥಳ ಪಂಚನಾಮೆಗೆ ನನ್ನ ಸಹಿ ಇರುತ್ತದೆ. ದಿಃ 29.07.2022 ರಂದು ಅಮೃತೂರು ಪೋಲಿಸ ಠಾಣೆಯಲ್ಲಿ ಚಾಸಾ 2 ಅವರಿಗೆ ಹೊಡೆದ ಪ್ರಯುಕ್ತ ಮದ್ಯಾಹ್ನ 2 ರಿಂದ 3 ಗಂಟೆಯ ಸಮಯದಲ್ಲಿ ಸಹಿ ಪಡೆದಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ 8 ಸಹ ಸಹಿ ಮಾಡಿರುತ್ತಾರೆ. ನನ್ನ ಸಮಕ್ಷಮ ಏನನ್ನು ಜಪ್ತು ಮಾಡಿರುವುದಿಲ್ಲ.  ಸ್ಥಳ ಪಂಚನಾಮೆಗೆ ಇರುವ ಸಹಿಯನ್ನು ನಿ.ಪಿ 3(ಡಿ)  ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ  ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ಮಹಜರ ಸಮಯದಲ್ಲಿ ಚಾಸಾ 2 ಹಾಜರುಪಡಿಸಿದ ಸೀರೆ ಮತ್ತು ರವಿಕೆಯನ್ನು ಜಪ್ತು ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ 2 ಸಹ ಇದ್ದರು ಎಂದರೆ ಸರಿ. ಸದರಿ ಸೀರೆ ಮತ್ತು ರವಿಕೆ ಈ ದಿನ ನ್ಯಾಯಾಲಯದಲ್ಲಿರುತ್ತದೆ ಎಂದರೆ ಸರಿ. ಅವುಗಳನ್ನು ಮು. ಮಾ. 3 ಮತ್ತು 4 ಎಂದು ಗುರುತಿಸಲಾಯಿತು.

**ಆರೋಪಿ ಪರಃ ಪಾಟೀ ಸವಾಲುಃ ಬಿ.ಆರ್.ಆರ್ ವಕೀಲರಿಂದಃ**

ನನಗೆ ಚಾಸಾ 2 ಸ್ವಂತ ತಂಗಿ ಆಗಬೇಕು. ನಮ್ಮ ಊರು ಮತ್ತು ಚಾಸಾ 2 ಅವರ ಊರು ಬೇರೆ ಬೇರೆ ಎಂದರೆ ಸರಿ. ಪೋಲಿಸರು ನನಗೆ ನೋಟಿಸ್ ನೀಡಿರುವುದಿಲ್ಲ. ನಿ.ಪಿ 3 ರಲ್ಲಿ ನೋಟಿಸ ನೀಡಿ ಕರೆಸಿದ್ದೇವೆಂದು ನಮೂದು ಇದೆ ಎಂದರೆ ಅದು ಸುಳ್ಳು ಇರುತ್ತದೆ ನಾನು ಸಹಿ ಹಾಕಿದ್ದೇನಂದು ಹೇಳುವ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಮತ್ತು ಅದಕ್ಕೆ ಯಾರ ಯಾರ ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಮು. ಮಾ. ಗಳನ್ನು ಇದೇ ಮೊದಲು ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸೀರೆಯ ಬಣ್ಣ ಬಿಳಿ ಮತ್ತು ಕಪ್ಪು ಬಣ್ಣದ್ದಾಗಿರುತ್ತವೆ. ಸದರಿ ಸೀರೆಯನ್ನು ಊರಿನಿಂದ ಮಹಜರ ಮಾಡಿಕೊಂಡು ತಗೆದುಕೊಂಡು ಬಂದಿರುವುದಾಗಿ ಹೇಳಿರುತ್ತಾರೆಂದು ನುಡಿಯುತ್ತಾರೆ.

ಯಾವುದೇ ಘಟನೆ ಆಗದೆ ಇದ್ದ ಕಾರಣ ಮಹಜರಗೆ ಯಾರು ಸಹಿ ಮಾಡವುದಿಲ್ಲವೆಂದರೆ ಹೇಳಿ ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.